# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.34/2019

Pw-16

Cw-14

| | |
|---|---|
| ಸಾಕ್ಷಿದಾರರ ಹೆಸರುಃ | ಮೋಹನ್ ಸೂರಣಗಿ |
| ತಂದೆಃಗಂಡನ ಹೆಸರುಃ | ಗಾಳಪ್ಪ |
| ವಯಸ್ಸುಃ | 46 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಹಿರೇಮರಳಿಹಳ್ಳಿ, ತಾಃ ಸವಣೂರು |

**ದಿನಾಂಕ:14.06.2022 ರಂದು ಸಾಕ್ಷಿ ಹಾಜರಿದ್ದು, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ಈ ಕೇಸಿನ ಪಿರ್ಯಾದಿ ಮತ್ತು ಆರೋಪಿತರು ಗೊತ್ತಿಲ್ಲ. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ಗಲಾಟೆಯಾಗಿಲ್ಲ. ಯಾರು ಯಾರಿಗೆ ಯಾವುದರಿಂದ ಹೊಡೆದರು, ಬೈದರು ಗೊತ್ತಿಲ್ಲ. ಈ ಘಟನೆಯಿಂದ ನನಗೆ ಯಾವುದೇ ತೊಂದರೆಯಾಗಿಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತರು ನನಗೆ ಹೊಡೆದಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

ದಿನಾಂಕಃ30.07.2019 ರಂದು ಆರೋಪಿಗಳು ಚಾಸಾ-1 ಮತ್ತು ನನಗೆ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿದ್ದಾರೆಂದರೆ ಸರಿಯಲ್ಲ ಮತ್ತು ನನಗೆ ಕೈಯಿಂದ ಹೊಡೆದಿಲ್ಲ ಮತ್ತು ಆರೋಪಿಗಳು ನನಗೆ ಕುತ್ತಿಗೆ ಹಿಚುಕಲು ಪ್ರಯತ್ನಮಾಡಿದರು ಎಂದರೆ ಸರಿಯಲ್ಲ ಮತ್ತು ಆರೋಪಿತರು ನನಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ನಾನು --------------- ನನಗೆ ಗೊತ್ತಿದೆ ಅನ್ನುವ ಸಾಕ್ಷಿಯ ತನ್ನ ಹೇಳಿಕೆ ಭಾಗವನ್ನು ಓದಿ ಹೇಳಿದಾಗ ಸಾಕ್ಷಿಯು ತಾನು ಈ ರೀತಿ ಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಓದಿ ಹೇಳಿದ ಭಾಗವನ್ನು ನಿಪಿ-19 ಅಂತಾ ಗುರ್ತಿಸಲಾಯ್ತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯಮಾಡಲು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿ.ವಿ.ಎಸ್ ವಕೀಲರಿಂದಃ**

ಪಾಟೀ ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.